ಕೋಣೆಯಲ್ಲಿ ಗಹನವಾಗಿ ಬದುಕಿದೆ ಅಂದುಕೊಳ್ಳುವುದು ಸಂತೋಷವೇನು? ಅಥವಾ ಸಂತೋಷವೆಂದರೆ ಸಮಾಜದಲ್ಲಿ ಸುಖವಾಗಿ ಬದುಕುತ್ತ, ಎಲ್ಲರೂ ಬದುಕುವ ಹಾಗೆ ಬದುಕುತ್ತ, ಸಂತೋಷವಾಗಿದ್ದೇನೆ ಎಂದು ನಂಬಿಕೊಳ್ಳುವುದೋ? ಸುತ್ತಲೂ ಇರುವವರ ಜೊತೆ ಸಾಮರಸ್ಯವಿದೆ ಎಂದು ತೋರಿಸಿಕೊಳ್ಳುತ್ತ ಗುಟ್ಟಾಗಿ ಬರವಣಿಗೆಯಲ್ಲಿ ತೊಡಗುವುದು ಸಂತೋಷವೋ ದುಃಖವೋ? ಇವೆಲ್ಲ ಮನಸ್ಸು ಕೆಟ್ಟಾಗ ಹುಟ್ಟುತ್ತಿದ್ದ ಪ್ರಶ್ನೆಗಳು. ಸಂತೋಷವೆನ್ನುವುದು ಒಳ್ಳೆಯ ಬದುಕಿನ ಅಳತೆಗೋಲು ಅನ್ನುವ ವಿಚಾರ ನನಗೆ ಬಂದದ್ದು ಎಲ್ಲಿಂದ? ಜನ, ಪೇಪರುಗಳು, ಎಲ್ಲರೂ ಕೂಡ ಸಂತೋಷವೇ ಬದುಕಿನ ಮಾಪಕ ಅನ್ನುವ ಹಾಗೆ ವರ್ತಿಸುತ್ತಾರೆ. ಇದೊಂದೇ ಕಾರಣ ಸಾಲದೇ – ಈ ನಂಬಿಕೆಗೆ ವಿರುದ್ಧವಾದದ್ದೇ ಸತ್ಯವೇ ಎಂದು ಅನ್ವೇಷಿಸುವುದಕ್ಕೆ? ನಮ್ಮಪ್ಪ ಎಷ್ಟೋ ಸಾರಿ ಮನೆ ಬಿಟ್ಟು ಓಡಿ ಹೋಗಿದ್ದರು. ನಮ್ಮಪ್ಪನನ್ನು ನಾನೆಷ್ಟು ಬಲ್ಲೆ? ನಮ್ಮಪ್ಪನ ಅತೃಪ್ತಿಯನ್ನು ಹೇಗೆ ಅರ್ಥಮಾಡಿಕೊಳ್ಳಲಿ?

ನಮ್ಮಪ್ಪನ ಸೂಟ್‌ಕೇಸನ್ನು ಮೊದಲು ತೆರೆದಾಗ ಇವೆಲ್ಲ ಸಂಗತಿಗಳು ಮನಸ್ಸನ್ನು ಒತ್ತುತ್ತಿದ್ದವು. ನನಗೆ ಏನೇನೂ ತಿಳಿದಿರದ ಗುಟ್ಟಾದ ದುಃಖವೊಂದು ನಮ್ಮಪ್ಪನಲ್ಲಿ ಇತ್ತೋ, ಅದನ್ನು ಬರಹದ ಮೂಲಕ ಹೊರಚೆಲ್ಲಿ ಸಮಾಧಾನ ತಂದುಕೊಂಡರೋ? ಸೂಟ್‌ಕೇಸು ತೆಗೆಯುತ್ತಿದ್ದ ಹಾಗೇ ಪ್ರವಾಸದ ಪರಿಮಳ ನೆನೆದುಕೊಂಡೆ, ಹಲವು ನೋಟ್‌ಬುಕ್ಕುಗಳನ್ನು ಗುರುತಿಸಿದೆ. ವರ್ಷಗಳ ಮೊದಲು ಅಪ್ಪ ಅವನ್ನು ನನಗೆ ತೋರಿಸಿದಾಗ ಹೆಚ್ಚು ಏನೂ ಹೇಳಿರಲಿಲ್ಲ ಅನ್ನುವುದೂ ಮನಸ್ಸಿಗೆ ಬಂತು. ಈಗ ನನ್ನ ಕೈಯಲ್ಲಿದ್ದ ನೋಟ್‌ಬುಕ್ಕುಗಳನ್ನು ಅಪ್ಪ ಯುವಕರಾಗಿದ್ದಾಗ, ನಮ್ಮನ್ನೆಲ್ಲ ಬಿಟ್ಟು ಪ್ಯಾರಿಸ್‌ಗೆ ಹೋಗಿದ್ದಾಗ ಬರೆದು ತುಂಬಿಸಿದ್ದರು. ನಾನು ಮೆಚ್ಚಿಕೊಂಡಿದ್ದ ಲೇಖಕರ ಹಾಗೆ ಯಾರ ಜೀವನ ಚರಿತ್ರೆಗಳನ್ನು ಓದಿದ್ದೆನೋ ಅವರ ಹಾಗೆ ನಾನೂ ಕೂಡ ನಮ್ಮಪ್ಪ ಏನು ಬರೆದಿದ್ದಾರೆ, ಈಗ ನನಗಾಗಿರುವಷ್ಟು ವಯಸ್ಸು ಅವರಿಗೆ ಆಗಿದ್ದಾಗ ಏನು ಯೋಚನೆಮಾಡುತ್ತಿದ್ದರು ಅನ್ನುವುದನ್ನು ತಿಳಿಯಲು ಬಯಸಿದ್ದೆ. ಅಂಥ ವಿಷಯವೇನೂ ನೋಟ್‌ಬುಕ್ಕಿನಲ್ಲಿ ದೊರೆಯುವುದಿಲ್ಲ ಅನ್ನುವುದು ಬೇಗನೇ ತಿಳಿಯಿತು. ನಮ್ಮಪ್ಪನ ನೋಟ್‌ಬುಕ್ಕುಗಳಲ್ಲಿ ಲೇಖಕನ ದನಿ ಕೇಳಿಸಿದಾಗ

